ಬುದ್ಧನ ಪ್ರತಿಮೆ









ಸ್ತೂಪದ ಹಿಂಬದಿಯಲ್ಲಿರುವ 'ಚೈತ್ಯಾ'

ಎನ್ನುತ್ತಾರೆ. ಈ ತೋರಣಗಳಲ್ಲಿ ಬುದ್ಧನ ಹಿಂದಿನ ಜನ್ಮದ ಜಾತಕ ಕಥೆಗಳ ಚಿತ್ರಣವಿದೆ. ಛತ್ರಿ, ಮನೆ, ಆನೆ, ಸಿಂಹಾಸನ, ಚಕ್ರ, ಬೋಧಿ ವೃಕ್ಷ ಮುಂತಾದ ಸಂಕೇತಗಳ ಮೂಲಕ ಬುದ್ಧನನ್ನು ಚಿತ್ರಿಸಿದ್ದಾರೆ.

ಉತ್ತರ ದಿಕ್ಕಿನ ದ್ವಾರದಲ್ಲಿ ಕೋತಿಯೊಂದು ಬುದ್ಧನಿಗೆ ಜೇನನ್ನು ಕೊಡುತ್ತಿರುವ ಚಿತ್ರಣವೊಂದಿದೆ. ಬುದ್ಧನ ಕಾಲುಗಳ ನಡುವೆ ಧರ್ಮಚಕ್ರ, ವಿದೇಶಿಯರು ಪ್ರಾರ್ಥಿಸುತ್ತಿರುವುದು, ಗೌತಮನು ತನ್ನ ರಾಜ್ಯದಲ್ಲಿ ನೋಡಿದ ರೋಗಪೀಡಿತ ಮನುಷ್ಯ, ವೃದ್ಧ, ಶವದ ಮೆರವಣಿಗೆ, ಸುಜಾತ ಎಂಬ ಕನ್ಯೆಯು ಪಾಯಸವನ್ನು ಕೊಡುತ್ತಿರುವುದು, ಮೊದಲಾದ ಚಿತ್ರಣಗಳನ್ನು ಈ ತೋರಣದಲ್ಲಿ ನೋಡಬಹುದು. ಈ ದ್ವಾರದ ಹತ್ತಿರವೇ ಮೊದಲನೆ ಶತಮಾನದಲ್ಲಿದ್ದ ಸುಂಗ ವಂಶದ ದೊರೆ ಕಟ್ಟಿಸಿದ ಅಶೋಕ ಸ್ತಂಭವಿದೆ. ಇದರ ಮೇಲಿನ ಭಾಗ ಸಾಂಚಿಯ ವಸ್ತು ಸಂಗ್ರಹಾಲಯದಲ್ಲಿದೆ.

ಪೂರ್ವ ದಿಕ್ಕಿನ ತೋರಣದಲ್ಲಿ ಗೌತಮನು ಮಧ್ಯರಾತ್ರಿಯಲ್ಲಿ ಗೃಹತ್ಯಾಗ ಮಾಡಿದ್ದು, ಅಶೋಕನು ಬುದ್ಧನ ಅನುಯಾಯಿ ಆಗಿದ್ದು, ಬುದ್ಧನು ನಿರಂಜನ ಎಂಬ ನದಿಯ ಮೇಲೆ ನಡೆದುಕೊಂಡು ಹೋಗುತ್ತಿರುವುದು, ಗೌತಮನ ತಾಯಿಯ ಕನಸಿನಲ್ಲಿ ಅವಳ ಗರ್ಭವನ್ನು ಬಿಳಿ ಆನೆಯು ಪ್ರವೇಶಿಸುತ್ತಿರುವುದು, ಬುದ್ಧನು ಕಪಿಲವಸ್ತುವಿಗೆ ಬಂದಾಗ ರಾಜ ಶುದ್ಧೋದನ ಮತ್ತು ಅವನ ಪ್ರಜೆಗಳು ಬುದ್ಧನನ್ನು ಸ್ವಾಗತಿಸುತ್ತಿರುವುದು, ಅನೇಕ ಪ್ರಾಣಿ-ಪಕ್ಷಿಗಳು ಬುದ್ಧನನ್ನು ಸುತ್ತುವರೆದಿರುವುದು ಮೊದಲಾದ ದೃಶ್ಯಗಳ ಚಿತ್ರಣಗಳನ್ನು ನೋಡಬಹುದು.

ದಕ್ಷಿಣ ದಿಕ್ಕಿನ ದ್ವಾರದಲ್ಲಿ ಅಶೋಕನು ರಾಮಗ್ರಾಮದ ಸ್ತೂಪವನ್ನು ಒಡೆಯಲು ಹೋದಾಗ ಅಲ್ಲಿರುವ ಜನರು ಅವನನ್ನು ತಡೆಯುತ್ತಿರುವ ದೃಶ್ಯವಿದೆ. ಈ ತೋರಣದ ಹತ್ತಿರವೂ ಅಶೋಕ ಸ್ತಂಭವಿದೆ. ಈ ಕಂಬವು ಮುರಿದಿದ್ದು, ಅದರ ಮೇಲಿದ್ದ ಸಿಂಹದ ತಲೆಯನ್ನು ಸಾಂಚಿಯಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಿಡಲಾಗಿದೆ. ಈ ಸ್ತಂಭದಲ್ಲಿ ಬ್ರಾಹ್ಮಿ ಲಿಪಿಯಲ್ಲಿ ವಿವರಗಳನ್ನು ಕೆತ್ತಲಾಗಿದೆ.

ಪಶ್ಚಿಮ ದ್ವಾರದಲ್ಲಿ ಬುದ್ಧನ ಪುರ್ನಜನ್ಮದ ಕೆಲವು ದೃಶ್ಯಗಳು ಮತ್ತು ಬುದ್ಧನ ಮರಣದ ನಂತರ ದ್ರೋಣನೆಂಬ ಮುನಿಯು ಬುದ್ಧನ ಅಸ್ಥಿಯನ್ನು ರಾಜರುಗಳಿಗೆ ಹಂಚುತ್ತಿರುವ ದೃಶ್ಯದ ಚಿತ್ರಣಗಳು ಕಾಣಸಿಗುತ್ತವೆ.

ಸಾಂಚಿಯಲ್ಲಿ ಅನೇಕ ಬೌದ್ಧ ವಿಹಾರಗಳು ನಮ್ಮ ಗಮನ ಸೆಳೆಯುತ್ತವೆ. ದೊಡ್ಡ ಸ್ತೂಪದ ಹತ್ತಿರ ಶ್ರೀಲಂಕಾದವರು ನಡೆಸುತ್ತಿರುವ ವಸ್ತು ಸಂಗ್ರಹಾಲಯವಿದೆ.